


# ವಿಮಾನ ನಿಲ್ದಾಣವೆಂಬ ವೈಭವದ ಮಾಲ್




■ ಚಿತ್ರ– ಲೇಖನ: **ಮಂಜುನಾಥ ಡಿ.ಎಸ್**

**ಕೆ**ಲವು ದಶಕಗಳ ಹಿಂದೆ ಭಾರತೀಯ ವಿಮಾನ ನಿಲ್ದಾಣಗಳು ಪ್ರಯಾಣಿಕರ ಮೂಲಭೂತ ಅವಶ್ಯಕತೆಗಳನ್ನು ಮಾತ್ರ ಪೂರೈಸುತ್ತಿದ್ದವು. ವಿಮಾನ ನಿಲ್ದಾಣ ಎಂದರೆ ಆಗ ಪ್ರಯಾಣಿಕರು ಬರುವುದು, ಕ್ಯೂನಲ್ಲಿ ನಿಂತು ಟಿಕೆಟ್ ದೃಢೀಕರಿಸುವುದು, ವಿಮಾನಕ್ಕೆ ಕಾದು ಹತ್ತಿ ಹೋಗುವುದು– ಎನ್ನುವುದಷ್ಟೇ ಚಟುವಟಿಕೆಗಳಾಗಿದ್ದವು. ಆದರೆ ಈಗ ಕಾಲ ಬದಲಾಗಿದೆ. ಜನರ ಜೀವನಶೈಲಿ ಬದಲಾದಂತೆ ವಿಮಾನ ನಿಲ್ದಾಣಗಳಿಗೆ ಹೊಸ ಸ್ವರೂಪ ಬಂದವು. ತ್ವರಿತ ಗತಿಯಲ್ಲಿ ಬೆಳೆಯುತ್ತಿರುವ ಪ್ರಯಾಣಿಕರ ಸಂಖ್ಯೆಗೆ ಅನುಗುಣವಾಗಿ ವಿಮಾನ ನಿಲ್ದಾಣಗಳು ಬೃಹತ್ ವಿನ್ಯಾಸ ಪಡೆದುಕೊಂಡವು. ಆರ್ಥಿಕ ಅಗತ್ಯಕ್ಕೆ ಅನುಗುಣವಾಗಿ ಖಾಸಗಿ ಸಹಭಾಗಿತ್ವದ ಯುಗವೂ ಆರಂಭವಾಯಿತು. ಹೂಡಿದ ಬಂಡವಾಳ ಹಿಂಪಡೆಯಲು ವಾಣಿಜ್ಯೀಕರಣದ ಮಾರ್ಗವನ್ನು ಆಯ್ದುಕೊಳ್ಳಲಾಯಿತು. ತತ್ಪರಿಣಾಮವಾಗಿ ತಮ್ಮ ಸ್ವರೂಪವನ್ನು ಸಂಪೂರ್ಣ ಬದಲಿಸಿಕೊಂಡ ವಿಮಾನ ನಿಲ್ದಾಣಗಳು ವೈಭವದ ತಾಣಗಳಾದವು. ಈಗ ನೀವು ಯಾವುದಾರೂ ವಿಮಾನ